# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್–6062/2014

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ: 11/01/2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ಶಿಫಾರಸ್ಸು ವರದಿ

ವಿಷಯ: ಫಲಾನುಭವಿಯಾದ ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರು ಸುಳ್ಳು ದಾಖಲಾತಿಗಳನ್ನು ಸಲ್ಲಿಸಿ ಸಣ್ಣ ರೈತರ ದೃಢೀಕರಣ ಪತ್ರವನ್ನು ಪಡೆದು, ನಂತರ ಸದರಿ ದೃಢೀಕರಣ ಪತ್ರದ ಆಧಾರದ ಮೇಲೆ ಪಡೆದಿರುವ ಸೌಲಭ್ಯದ ಬಗ್ಗೆ ಸೂಕ್ತ ವಸೂಲಾತಿ ಕ್ರಮ ಜರುಗಿಸಲು ಹಾಗೂ 2ನೇ ಎದುರುದಾರರು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಸದರಿಯವರ ವಿರುದ್ಧ, ದಂಡ ಸಂಹಿತೆಯ ಅಡಿಯಲ್ಲಿ ಕ್ರಿಮಿನಲ್ ಮೋಕದ್ದಮೆ ಹೂಡುವುದಲ್ಲದೆ ಅವರಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಸದರಿಯವರಿಂದ ಸಿವಿಲ್ ಕಾನೂನಿನಡಿಯಲ್ಲಿ ವಸೂಲಾತಿ ಕ್ರಮ ಜರುಗಿಸಿ ಸರ್ಕಾರಕ್ಕೆ ಜಮಾ ಮಾಡಿಕೊಳ್ಳಲು ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ವರದಿಯ ನಡವಳಿಕೆ– ಕುರಿತು.,

*****

ಶ್ರೀ ಹೆಚ್.ಕೆ.ಶಿವಣ್ಣ ಬಿನ್ ಲೇಟ್ ಕಾಳಯ್ಯ, ಹೊಮ್ಮರಗಳ್ಳಿ ಗ್ರಾಮ, ಹಂಪಾಪುರ ಅಂಚೆ ಮತ್ತು ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ಎನ್.ಸಿ.ಜಗದೀಶ್. ಹಿಂದಿನ ತಹಶೀಲ್ದಾರ್, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ, (2) ಶ್ರೀ ಮಹದೇವಯ್ಯ, ರಾಜಸ್ವ ನಿರೀಕ್ಷಕರು, ಹಂಪಾಪುರ ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ, (3) ಶ್ರೀ ವೆಂಕಣಯ್ಯ, ಹಿಂದಿನ ಗ್ರಾಮ ಲೆಕ್ಕಾಧಿಕಾರಿಗಳು, ಹೊಮ್ಮರಗಳ್ಳಿ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ ಮತ್ತು, (4) ಶ್ರೀ ಬಸವರಾಜು, ಗ್ರಾಮ ಸಹಾಯಕ, ಹೊಮ್ಮರಗಳ್ಳಿ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ (ಇನ್ನು

ಮುಂದೆ '1 ರಿಂದ 4ನೇ ಎದುರುದಾರರುಗಳು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದಾಖಲಿಸಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರು ಹೊಮ್ಮರಗಳ್ಳಿ ಗ್ರಾಮದ ಸರ್ವೆ ನಂ. 82ರಲ್ಲಿ 5–15 ಎಕರೆ ಜಮೀನು, ಸರ್ವೆ ನಂ. 84/2ರಲ್ಲಿ 3–30 ಎಕರೆ ಜಮೀನು ಮತ್ತು ಕರಿಗಳ ಗ್ರಾಮದ ಸರ್ವೆ ನಂ. 200/ಬಿ49 ರಲ್ಲಿ 2–00 ಎಕರೆ ಖುಷ್ಕಿ ಜಮೀನು ಒಟ್ಟು 11–05 ಎಕರೆ ಜಮೀನಿರುತ್ತದೆಂದು, ಈ ವಿಷಯವು ಎದುರುದಾರರುಗಳಿಗೆ ಗೊತ್ತಿದ್ದರೂ ಸಹಾ, ಕಾನೂನು ಬಾಹಿರವಾಗಿ ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರಿಗೆ ಸಣ್ಣ ರೈತರ ದೃಢೀಕರಣ ಪತ್ರವನ್ನು ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಮತ್ತೆ ಮುಂದುವರೆದು, ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರು ಸದರಿ ದೃಢೀಕರಣ ಪತ್ರದ ಆಧಾರದ ಮೇಲೆ ಡಾ:ಬಿ.ಆರ್.ಅಂಬೇಡ್ಕರ್ ನಿಗಮದಿಂದ ಜಮೀನನ್ನು ಖರೀದಿಸಿ ಅಕ್ರಮವಾಗಿ ಎಂ.ಆರ್. ನಂ. 24/1989–90 ರಂತೆ ಖಾತೆ ಮಾಡಿಸಿಕೊಂಡಿರುತ್ತಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರ ದೂರಿಗೆ ಸಂಬಂಧಿಸಿದಂತೆ, ಎದುರುದಾರರಾದ ತಹಶೀಲ್ದಾರ್, ಹೆಚ್.ಡಿ.ಕೋಟೆ ತಾಲ್ಲೂಕು ರವರು ದಿನಾಂಕ: 10/07/2014ರ ಪತ್ರದ ರೀತ್ಯಾ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರು ಸುಳ್ಳು ಮಾಹಿತಿ ನೀಡಿ ಸಣ್ಣರೈತರ ದೃಢೀಕರಣ ಪತ್ರ ಪಡೆದಿರುತ್ತಾರೆಂದು ಹಂಪಾಪುರದ ರಾಜಸ್ವ ನಿರೀಕ್ಷಕರು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ. ಮತ್ತೆ ಮುಂದುವರೆದು, ಈ ಸಂಬಂಧ, ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರಿಗೆ ನೀಡಲಾಗಿದ್ದ ಸಣ್ಣರೈತರ ದೃಢೀಕರಣ ಪತ್ರವನ್ನು ದಿನಾಂಕ: 05/02/2014 ರಂದು ಹಿಂದಕ್ಕೆ ಪಡೆದುಕೊಳ್ಳಲಾಗಿದೆ ಎಂದು ಸಹಾ ತಿಳಿಸಿರುತ್ತಾರೆ. ಇದು ಅಲ್ಲದೇ, ವ್ಯವಸ್ಥಾಪಕರು, ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಲಕ್ಷ್ಮೀಪುರಂ, ಮೈಸೂರು ರವರಿಗೂ ಸಹಾ ಪತ್ರ ಬರೆಯಲಾಗಿರುತ್ತದೆಂದು ತಿಳಿಸಿರುತ್ತಾರೆ.

3. ಜಿಲ್ಲಾ ವ್ಯವಸ್ಥಾಪಕರು, ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಲಕ್ಷ್ಮೀಪುರಂ, ಮೈಸೂರು ರವರು ದಿನಾಂಕ: 10/07/2014ರ ಪತ್ರದ ರೀತ್ಯಾ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ

MYS/6062/14



ವರದಿಯಲ್ಲಿ, ತಹಶೀಲ್ದಾರ್ ರವರು ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರು ಸುಳ್ಳು ಮಾಹಿತಿ ನೀಡಿ ಸಣ್ಣರೈತರ ದೃಢೀಕರಣ ಪತ್ರವನ್ನು ಪಡೆದಿರುತ್ತಾರೆಂದು, ಈ ಸಂಬಂಧ, ಸದರಿಯವರಿಗೆ ನೀಡಲಾಗಿದ್ದ ಸಣ್ಣರೈತರ ದೃಢೀಕರಣ ಪತ್ರವನ್ನು ರದ್ದುಪಡಿಸಲಾಗಿರುತ್ತದೆಂದು ತಿಳಿಸಿರುವ ಸಂಬಂಧ, ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರಿಗೆ ನಿಗಮದ ಯೋಜನೆಯಡಿ ಸೌಲಭ್ಯ ಪಡೆಯಲು ಅನರ್ಹರಾಗಿರುವುದರಿಂದ, ಅವರಿಗೆ ನೀಡಿರುವ ಸೌಲಭ್ಯವನ್ನು ಹಿಂದಕ್ಕೆ ಪಡೆಯುವಂತೆ ಕೇಂದ್ರ ಕಛೇರಿಯವರು ಆದೇಶಿಸಿರುತ್ತಾರೆಂದು, ಈ ಸಂಬಂಧ, ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರಿಗೆ ಫಲಾನುಭವಿಯಾಗಿ ಆಯ್ಕೆ ಮಾಡಿ ನೀಡಲಾಗಿದ್ದ ಕೊಳವೆಬಾವಿ ವಿದ್ಯುದ್ದೀಕರಣ ಕೆಲಸವನ್ನು ಸ್ಥಗಿತಗೊಳಿಸಲಾಗಿದೆ ಹಾಗೂ ಕೊಳವೆಬಾವಿ ಕೊರೆಯುವ ವೆಚ್ಚ ವಿದ್ಯುದ್ದೀಕರಣ ಸರಬರಾಜು ವೆಚ್ಚ ಹಾಗೂ ಪಂಪ್ ಮತ್ತು ಮೋಟಾರ್ ಅಳವಡಿಕೆ ವೆಚ್ಚ ರೂ.87,678/– ಗಳನ್ನು ನಿಗಮಕ್ಕೆ ಕೂಡಲೇ ಮರುಪಾವತಿ ಮಾಡುವಂತೆ ಫಲಾನುಭವಿಗೆ ನೋಟಿಸ್ ನೀಡಲಾಗಿರುತ್ತದೆಂದು ತಿಳಿಸಿರುತ್ತಾರೆ.

4. ಈ ಸಂಬಂಧ, ತಹಶೀಲ್ದಾರ್, ಹೆಚ್.ಡಿ.ಕೋಟೆ ತಾಲ್ಲೂಕು ರವರು ದಿನಾಂಕ: 10/11/2016ರ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಪತ್ರದಲ್ಲಿ, ಶ್ರೀಮತಿ ಮಾದಮ್ಮ ಕೋಂ ಕಾಳಯ್ಯ ರವರಿಗೆ ಸಣ್ಣ ಹಿಡುವಳಿದಾರರೆಂದು ಪ್ರಮಾಣ ಪತ್ರ ನೀಡಿದವರು (1) ಶ್ರೀ ಎನ್.ಸಿ.ಜಗದೀಶ್, ಹಿಂದಿನ ತಹಶೀಲ್ದಾರ್, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ (ಹಾಲಿ ಉಪ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ ಕೊಠಡಿ ಸಂಖ್ಯೆ: 101, ಬೆಂಗಳೂರು), (2) ಶ್ರೀ ಹೆಚ್.ಎಂ.ಮಹದೇವಯ್ಯ, ಹಿಂದಿನ ರಾಜಸ್ವ ನಿರೀಕ್ಷಕರು, ಹಂಪಾಪುರ ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ, (ಹಾಲಿ ನಿವೃತ್ತಿ) ವಾಸ ಸ್ಥಳ: ನಂ. 1617, 9ನೇ ಮೇನ್, ಶ್ರೀರಾಂಪುರ 1ನೇ ಹಂತ, ಮೈಸೂರು ಮತ್ತು, (3) ಶ್ರೀ ವೆಂಕಣ್ಣಯ್ಯ, ಹಿಂದಿನ ಗ್ರಾಮ ಲೆಕ್ಕಾಧಿಕಾರಿಗಳು, ಹೊಮ್ಮರಗಳ್ಳಿ ಗ್ರಾಮ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ (ಹಾಲಿ ಮರಣ ಹೊಂದಿರುತ್ತಾರೆಂದು) ತಿಳಿಸಿರುತ್ತಾರೆ.

5. ತಹಶೀಲ್ದಾರ್, ಹೆಚ್.ಡಿ.ಕೋಟೆ ತಾಲ್ಲೂಕು ರವರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ, ಮೇಲ್ಕಂಡ ಮೂರು ಜನರು ಈಗಾಗಲೇ ದೂರಿನ ಮುಖಪುಟದಲ್ಲಿ ಎದುರುದಾರರುಗಳಾಗಿರುತ್ತಾರೆ. ಈ ಸಂಬಂಧ, ಸದರಿ ಮೂರು ಜನರ ಪೈಕಿ ಶ್ರೀ ವೆಂಕಣ್ಣಯ್ಯ

ರವರು ಈಗಾಗಲೇ ಮೃತ ಹೊಂದಿರುತ್ತಾರೆಂದು ತಿಳಿಸಿರುವ ಕಾರಣ, ಸದರಿಯವರನ್ನು ಹೊರತುಪಡಿಸಿ ಮೇಲ್ಕಂಡ ಇಬ್ಬರು ಎದುರುದಾರರುಗಳಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿದ್ದು, 2ನೇ ಎದುರುದಾರರು ದಿನಾಂಕ: 20/12/2016 ರಂದು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ದೂರಿನ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಪ್ರಸ್ತುತ ಹಂತದಲ್ಲಿ ಸದರಿ 2ನೇ ಎದುರುದಾರರ ಆಕ್ಷೇಪಣೆಗಳನ್ನು ಒಪ್ಪಲಾಗುವುದಿಲ್ಲ. ಹಾಗೂ 1ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಲು ಕಾಲಾವಕಾಶ ನೀಡಬೇಕಾಗಿ ದಿನಾಂಕ: 08/12/2016ರ ಪತ್ರದ ಮುಖಾಂತರ ಕೋರಿರುತ್ತಾರೆ. ಆದರೆ, ಇದುವರೆವಿಗೂ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, 1ನೇ ಎದುರುದಾರರಿಗೆ ದೂರುದಾರರ ದೂರಿನ ಮೇಲೆ ಏನು ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ, ಕಡತವನ್ನು ಅಂತಿಮ ಪರಿಶೋಧನೆ ಟಿಪ್ಪಣಿಗಾಗಿ post ಮಾಡಲಾಗಿದೆ.

6. ಜಿಲ್ಲಾ ವ್ಯವಸ್ಥಾಪಕರು, ಡಾ:ಬಿ.ಆರ್.ಅಂಬೇಡ್ಕರ್ ನಿಗಮ ನಿಯಮಿತ, ಮೈಸೂರು ಜಿಲ್ಲೆ ರವರು ದಿನಾಂಕ: 13/10/2015ರ ಪತ್ರದ ರೀತ್ಯಾ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರು ಪಡೆದಿದ್ದ ವೆಚ್ಚ ರೂ.87,678/- ಗಳಲ್ಲಿ ಪಂಪ್ ಮತ್ತು ಮೋಟಾರ್ ಹಾಗೂ ಪೂರಕ ಸಾಮಗ್ರಿಗಳ ವೆಚ್ಚ ರೂ.49,928/- ಗಳನ್ನು ವಸೂಲಿ ಮಾಡಲಾಗಿದೆ ಎಂದು ಹಾಗೂ ಉಳಿಕೆ ಕೊಳವೆಬಾವಿ ಕೊರೆದ ವೆಚ್ಚ ರೂ.37,750/- ಗಳನ್ನು ಪಾವತಿಸುವಂತೆ ನಿಗಮದ ವತಿಯಿಂದ ವಕೀಲರ ಮುಖಾಂತರ ನೋಟಿಸನ್ನು ಜಾರಿ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ, ಇದುವರೆವಿಗೂ ಉಳಿಕೆ ಮೊತ್ತವನ್ನು ವಸೂಲಿ ಮಾಡಿಕೊಂಡ ಬಗ್ಗೆ ಇದುವರೆವಿಗೂ ಯಾವುದೇ ವರದಿಯನ್ನು ಈ ಕಛೇರಿಗೆ ಸಲ್ಲಿಸಿರುವುದಿಲ್ಲ.

7. ದೂರಿನಲ್ಲಿ ಇರುವ ಆಪಾದನೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ 1 ರಿಂದ 3ನೇ ಎದುರುದಾರರುಗಳು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

- ಮಾದಮ್ಮ ಕೋಂ ಲೇಟ್ ಕಾಳಯ್ಯ ರವರು ಹೊಮ್ಮರಗಳ್ಳಿ ಗ್ರಾಮದ ಸರ್ವೆ ನಂ. 82ರಲ್ಲಿ 5-15 ಎಕರೆ ಜಮೀನು, ಸರ್ವೆ ನಂ. 84/2ರಲ್ಲಿ 3-30 ಎಕರೆ ಜಮೀನು

MYS/6062/14



ಮತ್ತು ಕರಿಗಳ ಗ್ರಾಮದ ಸರ್ವೆ ನಂ. 200/ಬಿ49 ರಲ್ಲಿ 2-00 ಎಕರೆ ಖುಷ್ಕಿ ಜಮೀನು ಒಟ್ಟು 11-05 ಎಕರೆ ಜಮೀನುಗಳನ್ನು ಹೊಂದಿರುತ್ತಾರೆ.

- ಮೇಲ್ಕಂಡ ಅಂಶಗಳು 2 ಮತ್ತು 3ನೇ ಎದುರುದಾರರುಗಳಿಗೆ ಗೊತ್ತಿದ್ದರೂ ಸಹಾ, ಕಾನೂನು ಬಾಹಿರವಾಗಿ ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರಿಗೆ ಸಣ್ಣ ರೈತರ ದೃಢೀಕರಣ ಪತ್ರವನ್ನು ನೀಡಬಹುದೆಂದು 1ನೇ ಎದುರುದಾರರಿಗೆ ಶಿಫಾರಸ್ಸು ಮಾಡುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- 2 ಮತ್ತು 3ನೇ ಎದುರುದಾರರುಗಳು ಶಿಫಾರಸ್ಸು ಮಾಡಿರುವುದನ್ನು ಕೂಲಂಕಷವಾಗಿ ಪರಿಶೀಲಿಸಿದೇ, ಏಕಾಏಕಿಯಾಗಿ 1ನೇ ಎದುರುದಾರರು ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರು ಸಣ್ಣ ಹಿಡುವಳಿದಾರರು ಎಂದು ಘೋಷಿಸಿ, ಸದರಿಯವರಿಗೆ ಸಣ್ಣ ರೈತರು ದೃಢೀಕರಣ ಪತ್ರವನ್ನು ನೀಡುವ ಮೂಲಕ ರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರು ಸದರಿ ದೃಢೀಕರಣ ಪತ್ರದ ಆಧಾರದ ಮೇಲೆ ಡಾ:ಬಿ.ಆರ್.ಅಂಬೇಡ್ಕರ್ ನಿಗಮದಿಂದ ಜಮೀನನ್ನು ಖರೀದಿಸಿ ಅಕ್ರಮವಾಗಿ ಎಂ.ಆರ್. ನಂ. 24/1989-90 ರಂತೆ ಖಾತೆ ಮಾಡಿಸಿಕೊಂಡಿರುತ್ತಾರೆ ಹಾಗೂ ಕೊಳವೆ ಬಾವಿ ಸವಲತ್ತನ್ನು ಡಾ: ಬಿ.ಆರ್.ಅಂಬೇಡ್ಕರ್ ವತಿಯಿಂದ ಪಡೆದಿರುವುದು ಕಂಡುಬರುತ್ತದೆ.

8. ದೂರುದಾರರು ದೂರು ಹಾಗೂ ಲಗತ್ತಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ '1 ರಿಂದ 3ನೇ ಎದುರುದಾರರುಗಳು' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, '1 ರಿಂದ 3ನೇ ಎದುರುದಾರರುಗಳು' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

Sd/-

9. 3ನೇ ಎದುರುದಾರರು ಮರಣ ಹೊಂದಿರುವ ಕಾರಣ, ಅವರ ವಿರುದ್ಧ ಪ್ರಕ್ರಿಯೆಯನ್ನು ಕೈಬಿಡಬಹುದಾಗಿದೆ.

10. 4ನೇ ಎದುರುದಾರರ ವಿರುದ್ಧ ಯಾವುದೇ ಆರೋಪವು ತಹಶೀಲ್ದಾರ್ ರವರ ವರದಿಯಲ್ಲಿ ಹಾಗೂ ಕಡತದಲ್ಲಿನ ದಾಖಲಾತಿಗಳಲ್ಲಿ ಸಾಬೀತಾಗಿರದೇ ಇರುವ ಕಾರಣ ಅವರ ವಿರುದ್ಧ ಪ್ರಕ್ರಿಯೆಯನ್ನು ಕೈಬಿಡಬಹುದಾಗಿದೆ.

11. 2ನೇ ಎದುರುದಾರರಾದ ಶ್ರೀ ಹೆಚ್.ಎಂ.ಮಹದೇವಯ್ಯ, ಹಿಂದಿನ ರಾಜಸ್ವ ನಿರೀಕ್ಷಕರು ಹಂಪಾಪುರ ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ, (ಹಾಲಿ ನಿವೃತ್ತಿ) ವಾಸ ಸ್ಥಳ: ನಂ. 1617, 9ನೇ ಮೇನ್, ಶ್ರೀರಾಂಪುರ 1ನೇ ಹಂತ, ಮೈಸೂರು ರವರು ಈಗಾಗಲೇ ನಿವೃತ್ತಿ ಹೊಂದಿರುತ್ತಾರೆ. ಸದರಿ ಕರ್ತವ್ಯ ಲೋಪವು 2011ನೇ ಸಾಲಿನದ್ದಾಗಿದ್ದು, ಸದರಿ ಘಟನೆಯು 4 ವರ್ಷಕ್ಕಿಂತ ಹೆಚ್ಚು ಹಿಂದಿನದ್ದಾಗಿರುವ ಕಾರಣ 2ನೇ ಎದುರುದಾರರ ವಿರುದ್ಧ ಕೆ.ಸಿ.ಎಸ್.ಆರ್., 214 (2) (ಬಿ) (ii) ರಡಿ ತನಿಖೆ ಕೈಗೊಳ್ಳಲು ಅವಕಾಶ ಇರುವುದಿಲ್ಲ. ಹಾಗೂ ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರಿಗೆ ನೀಡಲಾಗಿದ್ದ ವೆಚ್ಚ ರೂ.87,678/- ಗಳ ಪೈಕಿ ರೂ.49,928/- ಗಳನ್ನು ಮಾತ್ರ ವಸೂಲಿ ಮಾಡಲಾಗಿದ್ದು, ಉಳಿದ ವೆಚ್ಚ ರೂ.37,750/- ಗಳನ್ನು ಇದುವರೆವಿಗೂ ವಸೂಲಿ ಮಾಡಿರುವುದಿಲ್ಲ.

12. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ ಈ ಕೆಳಕಂಡ ಅಂಶಗಳ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ತಿಳಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

(1) ಶ್ರೀಮತಿ ಮಾದಮ್ಮ ಕೋಂ ಲೇಟ್ ಕಾಳಯ್ಯ ರವರಿಗೆ ನೀಡಲಾಗಿದ್ದ ವೆಚ್ಚ ರೂ.87,678/- ಗಳ ಪೈಕಿ ರೂ.49,928/- ಗಳನ್ನು ಮಾತ್ರ ವಸೂಲಿ ಮಾಡಲಾಗಿದ್ದು, ಉಳಿದ ವೆಚ್ಚ ರೂ.37,750/- ಗಳನ್ನು ಇದುವರೆವಿಗೂ ವಸೂಲಿ ಮಾಡದ ಬಗ್ಗೆ ಸೂಕ್ತ ವಸೂಲಾತಿ ಕ್ರಮ ಜರುಗಿಸಿ ಸರ್ಕಾರಕ್ಕೆ ಜಮಾ ಮಾಡಿಕೊಳ್ಳಲು ನಿರ್ದೇಶಿಸಿ ಶಿಸ್ತು

MMS/6062/14



ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಬಹುದಾಗಿದೆ.

(2) 2ನೇ ಎದುರುದಾರರಾದ ಶ್ರೀ ಹೆಚ್.ಎಂ.ಮಹದೇವಯ್ಯ, ಹಿಂದಿನ ರಾಜಸ್ವ ನಿರೀಕ್ಷಕರು, ಹಂಪಾಪುರ ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ, (ಹಾಲಿ ನಿವೃತ್ತಿ) ವಾಸ ಸ್ಥಳ: ನಂ. 1617, 9ನೇ ಮೇನ್, ಶ್ರೀರಾಂಪುರ 1ನೇ ಹಂತ, ಮೈಸೂರು ರವರು ಈಗಾಗಲೇ ನಿವೃತ್ತಿ ಹೊಂದಿರುತ್ತಾರೆ. ಸದರಿ ಕರ್ತವ್ಯ ಲೋಪವು 2011ನೇ ಸಾಲಿನದ್ದಾಗಿದ್ದು, ಸದರಿ ಘಟನೆಯು 4 ವರ್ಷಕ್ಕಿಂತ ಹೆಚ್ಚು ಹಿಂದಿನದ್ದಾಗಿರುವ ಕಾರಣ 2ನೇ ಎದುರುದಾರರ ವಿರುದ್ಧ ಕೆ.ಸಿ.ಎಸ್.ಆರ್., 214 (2) (ಬಿ) (ii) ರಡಿ ತನಿಖೆ ಕೈಗೊಳ್ಳಲು ಅವಕಾಶ ಇರುವುದಿಲ್ಲ. ಆದ್ದರಿಂದ, ಸದರಿ 2ನೇ ಎದುರುದಾರರ ವಿರುದ್ಧ, ದಂಡ ಸಂಹಿತೆಯ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡುವುದಲ್ಲದೆ ಅವರಿಂದ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಸದರಿಯವರಿಂದ ಸಿವಿಲ್ ಕಾನೂನಿನಡಿಯಲ್ಲಿ ವಸೂಲಾತಿ ಕ್ರಮ ಜರುಗಿಸಿ ಸರ್ಕಾರಕ್ಕೆ ಜಮಾ ಮಾಡಿಕೊಳ್ಳಲು ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

13. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ **ಒಂದು ತಿಂಗಳ ಅವಧಿಯೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 11-1-17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.

11/1/17